ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಗ್ರಾಮೀಣ ಕುಡಿಯುವ ನೀರಿನ ಬಾಬ್ತಿಗಾಗಿ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನ ಕೆಳಕಂಡಂತಿದೆ (ರೂ. ಕೋಟಿಗಳಲ್ಲಿ)

| ವರ್ಷ | ಬಿಡುಗಡೆ | ವೆಚ್ಚ |
|---|---|---|
| 2004—05 | 169.66 | 155.57 |
| 2005–06 | 271.79 | 251.75 |
| 2006–07 (ಮಾರ್ಚ್–07ರ ಅಂತ್ಯಕ್ಕೆ) | 277.54 | 207.76 |
| ಒಟ್ಟು | 718.99 | 615.08 |

ಆ) ಇದರಲ್ಲಿ ತುಮಕೂರು ಜಿಲ್ಲೆಗೆ ಒದಗಿಸಿದ ಮತ್ತು ಖರ್ಚು ಮಾಡಿದ ಹಣವೆಷ್ಟು (ವಿವರ ನೀಡುವುದು)?

ಈ ಪೈಕಿ ಕೇಂದ್ರವಲಯದಡಿ ತುಮಕೂರು ಜಿಲ್ಲೆಗೆ ರೂ.34.98 ಕೋಟಿ ಬಿಡುಗಡೆಯಾಗಿದ್ದು, ರೂ.31.31 ಕೋಟಿ (ಫೆಬ್ರವರಿ 2007ರ ಅಂತ್ಯಕ್ಕೆ) ವೆಚ್ಚವಾಗಿದೆ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1190(1578)**
**ಮಾನ್ಯ ಸದಸ್ಯರ ಹೆಸರು : ಶ್ರೀ. ಕ್ಯಾತಸಂದ್ರ ಎನ್.ರಾಜಣ್ಣ(ಬೆಳ್ಳಾವಿ)**
**ಉತ್ತರಿಸುವ ಸಚಿವರು : ಶ್ರೀ. ಡಿ.ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)**

ಅ) ತುಮಕೂರು ಜಿಲ್ಲೆಯಲ್ಲಿ ಇವರು ಪದವಿ ಕಾಲೇಜುಗಳು ಎಷ್ಟು ಹಾಗೂ ಅವುಗಳಲ್ಲಿ ಯಾವ ಯಾವ ಪದವಿ ವಿಭಾಗಗಳ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡಲಾಗಿದೆ;

ತುಮಕೂರು ಜಿಲ್ಲೆಯಲ್ಲಿ 12 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು 08 ಖಾಸಗಿ ಅನುದಾನಿತ ಕಾಲೇಜುಗಳಿವೆ ಇವುಗಳಲ್ಲಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಿವೆ.

ಆ) ಈ ಕಾಲೇಜುಗಳಿಗೆ ಸ್ವಂತ ಕಟ್ಟಡ ಮತ್ತಿತರ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆಯೆ;

ತುಮಕೂರು ಜಿಲ್ಲೆಯ ಹೆಬ್ಬೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇರುವುದಿಲ್ಲ. ಈ ಕಾಲೇಜಿಗೆ ನಿವೇಶನವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ. ಖಾಸಗಿ ಅನುದಾನಿತ ಕಾಲೇಜುಗಳಿಗೆ ಸ್ವಂತ ಕಟ್ಟಡ ಮತ್ತಿತರ ಸೌಲಭ್ಯ ಒದಗಿಸುವುದನ್ನು ಸಂಬಂಧಪಟ್ಟ ಕಾಲೇಜುಗಳ ಆಡಳಿತ ಮಂಡಳಿಗಳು ನೋಡಿಕೊಳ್ಳುತ್ತವೆ.

ಇ) ಇಲ್ಲವಾದಲ್ಲಿ, ಈ ಬಗ್ಗೆ ಕೈಗೊಳ್ಳುವ ಸಕಾಲಿಕ ಕ್ರಮಗಳೇನು;

ಅನುದಾನಿ ಕಾಲೇಜುಗಳಿಗೆ ಸ್ವಂತ ಕಟ್ಟಡ ಮತ್ತಿತರ ಸೌಲಭ್ಯ ಒದಗಿಸುವುದನ್ನು ಸಂಬಂಧಪಟ್ಟ ಕಾಲೇಜುಗಳ ಆಡಳಿತ ಮಂಡಳಿಗಳು ನೋಡಿಕೊಳ್ಳುತ್ತವೆ.

ಈ) ಈ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿಗಳು ಪೂರ್ಣ ಪ್ರಮಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಯೆ;

ಸರ್ಕಾರಿ ಕಾಲೇಜುಗಳಲ್ಲಿ ಕಾರ್ಯಭಾರದನ್ವಯ ಒಟ್ಟು 47 ಪೂರ್ಣ ಕಾಲಿಕ ಉಪನ್ಯಾಸಕರಲ್ಲದೆ 202 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ತುಂಬಲು ಸರ್ಕಾರದ ಅನುಮತಿ ನೀಡಲಾಗಿದೆ.

ಉ) ಖಾಲಿ ಇರುವ ವಿವಿಧ ಬೊಧಕ ಸಿಬ್ಬಂದಿ ಹುದ್ದೆಗಳೆಷ್ಟು;

ಸರ್ಕಾರಿ ಕಾಲೇಜುಗಳಲ್ಲಿ ಖಾಲಿ ಇರುವ ಒಟ್ಟು 24 ಹುದ್ದೆಗಳು ಖಾಲಿ ಇದ್ದು, ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ. ಅದೇ ರೀತಿ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ 37 ಹುದ್ದೆಗಳು ಖಾಲಿ ಇದ್ದು, ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಊ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಸರ್ಕಾರಿ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಈಗಾಗಲೇ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಕಳುಹಿಸಿದ್ದು, ಆಯ್ಕೆ ಪಟ್ಟಿಯನ್ನು ಸ್ವೀಕರಿಸಿದ ನಂತರ ಮುಂದಿನ ಕ್ರಮಕೈಗೊಳ್ಳಲಾಗುವುದು. ಖಾಸಗಿ ಅನುದಾನಿತ ಕಾಲೇಜುಗಳಲ್ಲಿರುವ ಬೋಧಕ ವೃಂದದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಅನುಮತಿ ನೀಡಲಾಗಿದೆ.

**ಅನುಬಂಧ–1**

**ಕಾಲೇಜು ಶಿಕ್ಷಣ ಇಲಾಖೆ**

**ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ–ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರ**

| ಕ್ರ. ಸಂ. | ಕಾಲೇಜಿನ ಹೆಸರು ಮತ್ತು ಸ್ಥಳ | ವಿಷಯ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸು ತ್ತಿರುವವರ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಸಕಕಾ ತುಮಕೂರು | ಅರ್ಥಶಾಸ್ತ್ರ | 6 | 4 | 2 |
| 2 | ಸವಿಕಾ ತುಮಕೂರು | ಭೌತಶಾಸ್ತ್ರ | 16 | 12 | 4 |
| | | ರಸಾಯನಶಾಸ್ತ್ರ | 14 | 12 | 2 |

| | | | | | |
|---|---|---|---|---|---|
| | | ಪ್ರಾಣಿಶಾಸ್ತ್ರ | 7 | 5 | 2 |
| 3 | ಸಪ್ರದಕಾ ಗುಬ್ಬಿ | ಇಂಗ್ಲೀಷ್ | 2 | 1 | 1 |
| | | ಇತಿಹಾಸ | 3 | 2 | 1 |
| | | ಸಮಾಜ ಶಾಸ್ತ್ರ | 2 | 1 | 1 |
| 4 | ಸಪ್ರದಕಾ ಶಿರಾ | ರಾಜ್ಯಶಾಸ್ತ್ರ | 3 | 2 | 1 |
| | | ಭೌತಶಾಸ್ತ್ರ | 2 | 1 | 1 |
| | | ರಸಾಯನ ಶಾಸ್ತ್ರ | 3 | 1 | 1 |
| | | ಗಣಿತಶಾಸ್ತ್ರ | 2 | 1 | 1 |
| | | ಸಸ್ಯಶಾಸ್ತ್ರ | 3 | 1 | 1 |
| 5 | ಸಪ್ರದಕಾ ಕುಣಿಗಲ್ | ಇತಿಹಾಸ | 3 | 2 | 1 |
| 6 | ಸಪ್ರದಕಾ ತುರುವೇಕೆರೆ | ರಾಜ್ಯಶಾಸ್ತ್ರ | 1 | 0 | 1 |
| | | ಸಮಾಜಶಾಸ್ತ್ರ | 1 | 0 | 1 |
| 7 | ಸಪ್ರದಕಾ ಪಾವಗಡ | ಇತಿಹಾಸ | 3 | 2 | 1 |
| | | **ಒಟ್ಟು** | **71** | **47** | **24** |

**ಅನುಬಂಧ–2**

**ತುಮಕೂರು ಜಿಲ್ಲೆಯಲ್ಲಿರುವ ಪದವಿ ಕಾಲೇಜುಗಳಲ್ಲಿ ಖಾಲಿ ಇರವು ವಿವಿಧ ಬೋಧಕ ಸಿಬ್ಬಂದಿಗಳ ಮಾಹಿತಿ**

| ಕ್ರ. ಸಂ. | ಕಾಲೇಜುಗಳ ಹೆಸರು | ಖಾಲಿ ಇರವು ಬೋಧಕ ಹುದ್ದೆಗಳ ಸಂಖ್ಯೆ |
|---|---|---|
| 1 | ಟಿ.ವಿ.ವಿ. ಪ್ರಥಮ ದರ್ಜೆ ಕಾಲೇಜು, ಮಧುಗಿರಿ | 5 |
| 2 | ನವೋದಯ ಪ್ರಥಮ ದರ್ಜೆ ಕಾಲೇಜು ಚಿಕ್ಕನಾಯಕನಹಳ್ಳಿ | 2 |
| 3 | ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು | 3 |
| 4 | ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜು, ತಿಪಟೂರು | 6 |
| 5 | ಶ್ರೀ ಸಿದ್ಧಗಂಗಾ ಬಾಲಕರ ಕಾಲೇಜು, ತುಮಕೂರು | 13 |

| | | |
|---|---|---|
| 6 | ಶ್ರೀ ಸಿದ್ಧಗಂಗಾ ಬಾಲಕಿಯರ ಕಾಲೇಜು, ತುಮಕೂರು | 5 |
| 7 | ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು | 2 |
| 8 | ಯೂನಿಯನ್ ಕ್ರಿಶ್ಚಿಯನ್ ಕಾಲೇಜು, ತುಮಕೂರು | 1 |
| | ಒಟ್ಟು | 37 |

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1191(1579)**
**ಮಾನ್ಯ ಸದಸ್ಯರ ಹೆಸರು: ಶ್ರೀ. ಕ್ಯಾತಸಂದ್ರ ಎನ್.ರಾಜಣ್ಣ(ಬೆಳ್ಳಾವಿ)**
**ಉತ್ತರಿಸುವ ಸಚಿವರು: ಶ್ರೀ. ಪಿ.ಎಂ.ಉದಾಪಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ರಾಜ್ಯದಲ್ಲಿ ಖಾಲಿ ಇರುವ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆಗಳು ಎಷ್ಟು? (ಜಿಲ್ಲಾವಾರು ವಿವರ ನೀಡುವುದು);

ಆ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

328 ಹುದ್ದೆಗಳು ಖಾಲಿ ಇವೆ. ಅನುಬಂಧ–1 ರಲ್ಲಿ ನೀಡಲಾಗಿದೆ. ಖಾಲಿ ಹುದ್ದೆಗಳನ್ನು ಬಡ್ತಿ ಮತ್ತು ನೇರ ನೇಮಕಾತಿ ಮೂಲಕ ತುಂಬಲು ಕ್ರಮ ವಹಿಸಲಾಗುತ್ತಿದೆ.

ಇ) ಎಷ್ಟು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇವೆ?

ನಿವೃತ್ತಿ ಹಾಗೂ ಪದೋನ್ನತಿಯಿಂದ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹುದ್ದೆಗಳು ಆಗಿಂದ್ಯಾಗ್ಗೆ ಖಾಲಿಯಾಗುತ್ತಿರುತ್ತದೆ.

ಈ) ಬೆಳ್ಳಾವಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಲಿ ಇರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಸಂಖ್ಯೆ ಹಾಗೂ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು).

ಬೆಳ್ಳಾವಿ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಗ್ರಾಮ ಪಂಚಾಯಿತಿ ಹುದ್ದೆ ಖಾಲಿ ಇದೆ. ಖಾಲಿ ಹುದ್ದೆಗಳನ್ನು ಬಡ್ತಿ ಮತ್ತು ನೇರ ನೇಮಕಾತಿ ಮೂಲಕ ತುಂಬಲು ಕ್ರಮ ವಹಿಸಲಾಗುತ್ತದೆ.

ಅನುಬಂಧ–1

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1579 ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ**

| ಕ್ರ ಸಂ. | ಜಿಲ್ಲಾ ಪಂಚಾಯ್ತಿ ಹೆಸರು | ಖಾಲಿ ಹುದ್ದೆಗಳು | |
|---|---|---|---|
| | | ಗ್ರೇಡ್–1 | ಗ್ರೇಡ್–2 |